# ಕರ್ನಾಟಕ ವಿಧಾನ ಪರಿಷತ್ತು
## 148ನೇ ಅಧಿವೇಶನ 2022

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 410 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ದಿನನಿತ್ಯ ಅಪಘಾತ ಮತ್ತು ಅಪಘಾತದಿಂದ ಸಾವುಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಸ್ತೆ ಸುರಕ್ಷತೆ ಹಿತದೃಷ್ಟಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ 103 ಸಾಇಪ 2015, ದಿನಾಂಕ: 21-09-2015 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನೀತಿ-2015 ಅನ್ನು ಜಾರಿಗೆ ತರಲಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ-01 ರಲ್ಲಿ ಲಗತ್ತಿಸಿದೆ.**<br>ರಾಜ್ಯದಲ್ಲಿ ರಸ್ತೆ ಅಪಘಾತಗಳನ್ನು ನಿಯಂತ್ರಿಸಿ, ಅವುಗಳಿಂದುಂಟಾಗುವ ಸಾವುನೋವುಗಳನ್ನು ತಡೆಗಟ್ಟಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ:35:ಶಾಸನ:2017, ದಿನಾಂಕ: 07-12-2017 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ:150:ಸಾಇಪ:2018, ದಿನಾಂಕ:02-08-2018ರನ್ವಯ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಿರುತ್ತದೆ. ಅಧಿಸೂಚನೆ ಪ್ರತಿಗಳನ್ನು **ಅನುಬಂಧ-02 ರಲ್ಲಿ ಲಗತ್ತಿಸಿದೆ.**<br>ರಸ್ತೆ ಸುರಕ್ಷತೆಗಾಗಿ ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-03 ರಲ್ಲಿ ಲಗತ್ತಿಸಿದೆ.** |
| ಆ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ರಸ್ತೆ ಅಪಘಾತದಿಂದ ಮರಣ ಹೊಂದಿದವರ ಸಂಖ್ಯೆ ಎಷ್ಟು; (ಜಿಲ್ಲೆವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ರಸ್ತೆ ಅಪಘಾತದಿಂದ ಮರಣ ಹೊಂದಿದವರ ಸಂಖ್ಯೆಯ ವಿವರವನ್ನು ಒಳಾಡಳಿತ ಇಲಾಖೆರವರು ನೀಡಿದಂತೆ **ಅನುಬಂಧ-4 ರಲ್ಲಿ ಲಗತ್ತಿಸಿದೆ.** |
| ಇ) | ರಸ್ತೆ ಅಪಘಾತಕ್ಕೆ ಒಳಗಾದ ಸಂತ್ರಸ್ತರಿಗೆ ಮತ್ತು ಮೃತಪಟ್ಟ ಕುಟುಂಬದವರಿಗೆ ಆರ್ಥಿಕ ನೆರವು ನೀಡುವ ಯೋಜನೆ ರಾಜ್ಯ ಸರ್ಕಾರದಲ್ಲಿದೆಯೇ; | ಇಂತಹ ಯೋಜನೆ ಜಾರಿಯಲ್ಲಿಲ್ಲ. |
| ಈ) | ಇಲ್ಲದಿದ್ದಲ್ಲಿ, ರಸ್ತೆ ಅಪಘಾತಕ್ಕೆ ಒಳಗಾದ ಸಂತ್ರಸ್ತರಿಗೆ ಆರ್ಥಿಕ ನೆರವು ನೀಡಲು ಸರ್ಕಾರ ಕಾನೂನು ರೂಪಿಸಲು ಉದ್ದೇಶಿಸಿದೆಯೇ; (ವಿವರ ನೀಡುವುದು) | |
| ಉ) | ರಾಜ್ಯದಲ್ಲಿ PRAMC ಯೋಜನೆ ಅಡಿಯಲ್ಲಿ ಪದೇ ಪದೇ ಅಪಘಾತಕ್ಕೆ ಒಳಗಾಗುವ ಸ್ಥಳಗಳು (Black Spot) ಯಾವುವು; ಈ ಬ್ಲಾಕ್ ಸ್ಪಾಟ್‌ಗಳ ಅಭಿವೃದ್ಧಿಗೆ ವಿವಿಧ ಇಲಾಖೆಗಳ ಅಡಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಪೋಲೀಸ್ ಇಲಾಖೆಯು ದಿನಾಂಕ: 14-02-2020 ರ ಪತ್ರದಲ್ಲಿ ರಾಜ್ಯ ವ್ಯಾಪ್ತಿ 942 ಕಪ್ಪು ಚುಕ್ಕೆ ಸ್ಥಳಗಳ ಪಟ್ಟಿಯನ್ನು ಸಲ್ಲಿಸಿದ್ದು, ಇವುಗಳ ಪೈಕಿ 214 ಸ್ಥಳಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತಿದೆ. ಇದರಲ್ಲಿ 186 ಸಂಖ್ಯೆಯ ಕಪ್ಪು ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಕಪ್ಪು ಸ್ಥಳಗಳ ಸರಿಪಡಿಸುವಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ವಿವರವನ್ನು **ಅನುಬಂಧ-5 ರಲ್ಲಿ ಲಗತ್ತಿಸಿದೆ.**<br>ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-6 ರಲ್ಲಿ ಲಗತ್ತಿಸಿದೆ.** |

ಸಂಖ್ಯೆ. ಲೋಇ E-359 ಇಎಪಿ 2022

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು.

ಅನುಬಂಧ-1

(33)

# GOVERNMENT OF KARNATAKA

No: SARIE 103 SAEPA 2015

Karnataka Government Secretariat,
M.S. Building,
Bangalore, dated:21-09-2015.

## NOTIFICATION

## Sub: Karnataka State Road Safety Policy-2015

### 1.0. PREAMBLE:

The road accident scenario in Karnataka causes a great concern. More than 10000 persons die every year due to road accident. While fatal accidents cause loss of invaluable human life, all accidents cause pain, grief and misery as well as economic loss. The increasing number of accidents, loss of lives and resources necessitate the state Government to frame policy on Road Safety.

The Government of Karnataka is keen to take concerted measures to control the incidence of road accidents and ensure safe travel for all road users. Accordingly, the Government of Karnataka feel the need to formulate and enunciate this separate Road Safety Policy which will act as a guide to the concerned stake holder Departments and to the public.

### 2.0. VISION:

A safe road network for all road users, with priority to pedestrians and cyclists, to achieve zero road accidents in the long run.

### 3.0. MISSION:

Reduce road accidents by 25% and fatalities by 30% by 2020.

### 4.0. OBJECTIVE:

- Improving road engineering and design, increasing awareness, providing emergency care and strict enforcement on road.
- Design, develop and implement an Accident Information System to enable crash management in the State in the next two years.
- Provide a framework for undertaking coordinated actions and corrective measures by all concerned stake holder Departments.
- Provide the basis for accountability, evaluation, funding and research.

- Achieve 15% reduction in fatalities and injuries caused due to road Accidents in next 3 years.
- Supporting and building capability by working with the road safety community with better tools to support Road Safety programs.

## 5.0. IMPLEMENTATION STRATEGY:

Road safety is a multi-disciplinary problem and therefore it is important that interdepartmental coordinated approaches are required for sustainable reduction of road accidents and fatalities in the state. For effective implementation, Road Safety Council has been formed in Karnataka vide Gazette notification No. SARIE 165 SAFPA 2013, dated the 28th November, 2014 under the Chairmanship of the Minister for Transport, Karnataka. The Council comprises members from Transport, Home, Public Works, Health & Family Welfare, Education, Urban development, Urban land transport, Excise, Town planning Departments along with representatives from voluntary organizations. The Council advises on all matters pertaining to the following:—

- Manage, coordinate and commission all activities regarding road safety in the state.
- Planning and co-ordination of policies and practices.
- Standards of safety in the road transport sector.
- Formulate and recommend road safety programs for implementation
- Suggest areas for research and development to improve safety aspects.
- Monitor and control the road safety measures undertaken in the state.

Apart from the above, District Road Safety Committee has been formed in each District under the Chairmanship of Deputy Commissioner and District Magistrate as Chairman for implementation of the Road Safety Schemes.

## 6.0. ACTION:

Government of Karnataka will create an effective institutional mechanism to strengthen the Road Safety measures in the State and provide necessary support structures to enable each institution to play its role effectively. Some of the key actions to be undertaken are as follows:—

(751)

### 6.1. Strengthen Road Crash Database System:

Data systems requires a comprehensive assessment of road safety performances. The effective database system helps other stakeholder departments to develop Road safety programs in an effective manner.

The Karnataka Police, through its State Crime Record Bureau (SCRB), collects crash data on number of accidents occurred, accidents severity, types of vehicle involved, causes of accidents etc. However, the crash data collected presently is not very useful in understanding the general pattern and trends of crashes as they do not contribute to the holistic analysis of crashes and further development of effective road safety interventions.

As such crash data is key source of information for Government, Citizens, planners, facilitators and researchers. Government of Karnataka is working towards development of database management system. Following will be the key activities to improve the database.

- ➢ Create a database to fit the requirements of Home, Public Works, Transport, Health& Family Welfare, Urban Development Department and Research Institutions.
- ➢ All Trauma Care Centers, District Hospitals, 103 and 108 Ambulance Services to be connected to the database.
- ➢ Interfaces to be provided with VAHAN and SARATHI database of the State.
- ➢ GIS & GPS enablement for real time tracking.

### 6.2. Safe planning and design of roads:

The Government will take following measures for proper planning and design of roads:—

- ➢ Periodically identify accident prone areas/ black spots on the basis of accident intensity and severity.
- ➢ Take corrective actions in the identified accident prone areas and on the identified black spots through proper planning, design and construction techniques.
- ➢ Bring a concept of "**Self explaining roads**" and the "**Forgiving roads**" in the road network of entire state and implementing the actions such as lane marking, safety sign boards, crash barriers, curve treatments, develop all major junctions with safer treatments etc.

- Remove encroachments and obstructions affecting the full use of roads.
- Construct wayside amenities/service centers on major road network etc. which will result in substantial reduction in road accidents/fatalities.
- Introduce 'Traffic Calming' measures to physically reduce the speed in vulnerable stretches, near schools/ hospitals /markets / other busy community locations.
- Form a Road Safety cell under Transport Department and Road Safety Unit under Public Works Department to carry out the road safety activities.
- To conduct Road Safety Audit mandatorily for all new road construction projects and Road Safety Review for all existing roads which help to take appropriate remedial measures before accident happens.
- Develop a handbook on 'Road Safety Design Guidelines', "Road Safety Audit Field Guide", "Road Safety Review Field Guide", "Black spot Investigation Field Guide", "Traffic Control plans at Road Construction Field Guide" to be used by engineers at all levels.

**6.3. Safe Driving:**

Driver's error is a major cause of road accident and to address this issue, the Government intends to:—

- Undertake safety and awareness campaigns.
- Enforce fastening of seat belts and wearing of helmets as per statutory rules.
- Issuance of driving licenses from Automated Driving training Centers.
- Issuance of 'Certificate of Fitness' for vehicles from automated Inspection and Certification centers.
- Enforcement to check violation of basic safety requirements, drunken driving etc. and implement deterrent penal provisions including cancellation of driving license for repetitive offence.

## 6.4. Awareness, Education and Training for Road Users:

Government of Karnataka will undertake following activities to create awareness and educate Road Users:—

- Make Road Safety education programmes mandatory in schools and colleges.
- Conduct Road Safety awareness training programmes for teachers, parents and citizens.
- Road Safety awareness training to be given to the drivers before the issuance of driving license.
- Organize campaigns and orientation programmes for all categories of road users and make them aware of their respective responsibilities.
- Special emphasis on safety of vulnerable groups like school children, the disabled and senior citizens.

## 6.5. Enforcement of Safety Laws:

Government of Karnataka will take appropriate measures to strengthen and improve the quality of enforcement in order to ensure effective and uniform implementation across the State:--

- Upgrade the vehicles with latest equipments/ gadgets to implement effective traffic management and enforcement measures.
- Strengthen the police team conducting Highway Patrolling.
- Enforce spot penalties for overloading of passenger vehicles, drunken driving, non wearing of helmets and non fastening of seat belts.
- Provide continuous training to Traffic Police personnel.
- Introduce Road safety as an agenda in monthly review or quarterly review for all Stake holder Departments.

## 6.6. Emergency Medical Services for Road Accidents:

The key principle is to provide first aid that will stabilize the injured during the **'GOLDEN HOUR'**. Government of Karnataka has introduced 103 and 108 ambulance services in Karnataka. Provision of ambulances with

(28)



driver, helper and pharmacist/paramedical staff and establishment of trauma care centers along the NHs/SHs will be made in Karnataka:—

- Provision for Trauma care centers, Ambulances and Cranes at reasonable distance gaps on NH/SH for extending immediate clearance of road blockades at accident sites.
- Develop fully equipped Trauma Care Centers along the NHs and SHs with lifesaving equipments and facilities.
- The Patrol Cars, crash rescue vehicles (CRV's) & Ambulances to operate synchronously as a **"Crash Rescue Unit"** through a central control and coordination system.
- Promote involvement of private practitioners and hospitals in Emergency Medical Response (EMR) and trauma care.
- Maintain the access roads to each emergency care hospital pothole free and free from roadside parking or obstructions.
- Emergency vehicles to have preferred right on roads, which should be enforced to go to emergency care units of the hospitals as well as trauma care centers.
- Implement cashless treatment for 48 hours in trauma care centers
- Train all commercial vehicle drivers in First Aid trauma care centers.
- Casualty section of all district equipped hospitals to provide Emergency Medical Services to trauma cases.
- 108 ambulances to be placed on NHs and SHs in every 50 KM distance between two identified trauma care units.

### 6.7. Research for Road Safety:

The Government of Karnataka will promote research activity in road safety by identifying priority areas, funding of research initiatives and publication of reports in conferences, workshops & websites. The following activities will be carried out by Government of Karnataka:—

- Identify and nominate key institutes to carry out road safety research in the State.
- Prepare priorities for research areas following an in-depth review of road safety data available from Road Crash Database System.
- Strategy for implementing Road Safety initiatives in the State.

### 6.8. Strengthening Financial Environment for Road Safety:-

Road Safety measures require enhanced funding support for its sustainability. Government of Karnataka will undertake the following activities to ensure that the outcomes are achieved:-

- Identify measures for augmenting funding for Road Safety.
- Encourage Private participation in the task of raising funds for Road Safety.

### 6.9. Provision of corpus funds:

- Private vehicle carrying an accident victim to a nearest hospital to be subsequently reimbursed by the Health and Family Welfare Department, Government of Karnataka.

By order and in the name of the
Governor of Karnataka.

(K.BEERESH)
Under Secretary to Government,
Transport Department
(080-22032292)

**To:**

The Compiler, Karnataka Gazette, Bangalore for publication in the Extraordinary Gazette and supply 50 copies to the Desk Officer, Transport Department, M.S.Building, Bangaluru.

**Copy to:**

1. Chief Secretary to Government, Vidhana Soudha, Bangalore.
2. Director General & Inspector General of Police, Nrupatunga Road, Bangalore.
3. Principal Secretary to Government, Public Works Department, Vikasa Soudha Bangalore.
4. Principal Secretary to Government, Education Department.
5. Secretary to Government, Finance Department (Excise) Bangalore
6. Principal Secretary to Government, Urban Development Department, Vikasa Soudha, Bangalore
7. Commissioner of Transport & Road Safety, Bangaluru
8. Commissioner, Health & Family Welfare Dept., Bangalore.
9. Commissioner, Bruhat Bangalore Mahanagara Palike, Bangalore.
10. Commissioner, Department of Urban Land Transport (DULT) Bangalore.
11. Additional Commissioner of Police (Traffic), Infanty Road, Bangalore.
12. Commissioner, Municipal Administration, Bangaluru.
13. Managing Director, KSRTC, Bangalore.

14. Managing Director, BMTC, Bangalore.
15. Chief Engineer (National Highways), Public Works Department, Bangalore.
16. Director, Town Planning, 4th Gate, M.S.Building, Bangalore.
17. Commissioner, Department of Public Instruction, Bangalore.
18. Director, Road Safety Cell, Transport Department, MSIL Building, Cunningham Road, Bangalore.
19. P.S. to Hon'ble Transport Minister, Vikasa Soudha, Bangalore.
20. P.S. to the Additional Chief Secretary to Government, Transport Department.
21. P.A. to Deputy / Under Secretary to Government, Transport Department.

RNI No. KARBIL/2001/47147

# ಕರ್ನಾಟಕ ರಾಜಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| | | |
|---|---|---|
| ಭಾಗ-IVA | ಬೆಂಗಳೂರು, ಗುರುವಾರ, ಆಗಸ್ಟ್ ೨, ೨೦೧೮ (ಶ್ರಾವಣ ೧೧, ಶಕ ವರ್ಷ ೧೯೪೦) | ನಂ. ೧೨೦೬ |
| *Part-IVA* | *Bengaluru, Thursday, August 2, 2018 (Shravana 11, Shaka Varsha 1940)* | *No. 1206* |


ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂ: ಸಾರಿಇ 150 ಸಾಇಪ **2018**, ಬೆಂಗಳೂರು, ದಿನಾಂಕ: **02-08-2018**

The Karnataka State Road Safety Authority Act, 2017 (Karnataka Act 45 of 2017)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು ದಿನಾಂಕ: 02-08-2018ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ದಿನಾಂಕ:02-08-2018

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಸತ್ಯವತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**TRANSPORT SECRETARIAT**

**NOTIFICATION**

**No. SARIE 150 SAEPA 2018, Bengaluru, Dated: 02-08-2018.**

In exercise of the powers conferred by sub-section (2) of section 1 of the Karnataka State Road Safety Authority Act, 2017, (Karnataka Act No. 45 of 2017) the Government of Karnataka hereby appoints 02-08-2018 to be the day from which all provisions of the said Act shall come into force.

Date: 02-08-2018.

By Order and in the name of the Governor of Karnataka,

M.SATHYAVATHI
Under Secretary to Government,
Transport Department.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೧೦೦

RNI No. KARBIL/2001/47147

24

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ-IVA | ಬೆಂಗಳೂರು, ಗುರುವಾರ, ಡಿಸೆಂಬರ್ ೦೭, ೨೦೧೭ (ಮಾರ್ಗಶಿರ ೧೬, ಶಕ ವರ್ಷ ೧೯೩೯) | ನಂ. ೧೧೮೨ |
| Part-IVA | Bengaluru, Thursday, December 07, 2017 (Margashira 16, Shaka Varsha 1939) | No. 1182 |


ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 35 ಶಾಸನ 2017, ಬೆಂಗಳೂರು, ದಿನಾಂಕ: 07.12.2017

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017ಕ್ಕೆ 2017ರ ಡಿಸೆಂಬರ್ ತಿಂಗಳ 6ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2017ರ ಕರ್ನಾಟಕ ಅಧಿನಿಯಮ ಸಂಖ್ಯೆ:45 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 45

(2017ರ ಡಿಸೆಂಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017

(2017ರ ಡಿಸೆಂಬರ್ ತಿಂಗಳ 6ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸಲು ಒಂದು ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಹಾಗೂ ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ 'ಈ ಅಧಿನಿಯಮದ ಪ್ರಾರಂಭಕ್ಕೆ' ಎಂದು ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

2. ಪರಿಭಾಷೆಗಳು.- (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,-

(ಎ) "ಅಪಘಾತ" ಎಂದರೆ, ಸಾರ್ವಜನಿಕ ರಸ್ತೆಯಲ್ಲಿ ಮೋಟಾರು ವಾಹನದ ಬಳಕೆಯ ಕಾರಣದಿಂದಾಗಿ, ಯಾವುದೇ ಸಾರ್ವಜನಿಕ ಸ್ವತ್ತುಗಳಿಗೆ, ಇತರ ವಾಹನಗಳಿಗೆ ಅಥವಾ ಸಂದರ್ಭಾನುಸಾರವಾಗಿ ಯಾವುದೇ ಸ್ವತ್ತಿಗೆ ಹಾನಿಯನ್ನು ಉಂಟು ಮಾಡಿದ ಅಥವಾ ಯಾವೊಬ್ಬ ವ್ಯಕ್ತಿಗೆ ಮರಣ, ದೈಹಿಕ ಗಾಯವನ್ನು ಉಂಟು ಮಾಡಿದ ಯಾವುದೇ ಘಟನೆ;

(ಬಿ) "ಅಪರ ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಅಪರ ಆಯುಕ್ತ (ರಸ್ತೆ ಸುರಕ್ಷತೆ);

(ಸಿ) "ಪ್ರಾಧಿಕಾರ" ಎಂದರೆ, 4ನೇ ಪ್ರಕರಣದ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ';

(ಡಿ) "ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತ, ಆತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೂ ಸಹ ಆಯುಕ್ತನಾಗಿರತಕ್ಕದ್ದು;

(ಇ) "ಪರಿಷತ್ತು" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು;

(ಎಫ್) "ಜಿಲ್ಲೆ" ಎಂದರೆ, ಕಂದಾಯ ಜಿಲ್ಲೆ;

(ಜಿ) "ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ" ಎಂದರೆ, 21ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ;

(ಹೆಚ್) "ನಿಧಿ" ಎಂದರೆ, 12ನೇ ಪ್ರಕರಣ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ';

(ಐ) "ಸ್ಥಳೀಯ ಪ್ರಾಧಿಕಾರ" ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ. 14) ಅಡಿಯಲ್ಲಿ ರಚಿಸಿದ ಪಂಚಾಯತ್ ಅಥವಾ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ, 14) ಅಡಿಯಲ್ಲಿ ರಚಿಸಿದ ನಗರ ಪಾಲಿಕೆಗಳು;

(ಜೆ) "ಸಾರ್ವಜನಿಕ ರಸ್ತೆ"ಯು ಸಾರ್ವಜನಿಕರು ಪ್ರವೇಶಾವಕಾಶ ಹೊಂದಿರುವ ಯಾವುದೇ ಖಾಸಗಿ ರಸ್ತೆಯನ್ನು ಮತ್ತು ಸಂಚಾರಿ ವಿಭಾಜಕಗಳು, ರಸ್ತೆ ವಿಭಾಜಕಗಳು ಮತ್ತು ಪಾದಚಾರಿ ರಸ್ತೆಗಳನ್ನು ಒಳಗೊಳ್ಳುತ್ತದೆ;

(ಕೆ) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ವಿನಿಯಮಗಳು" ಎಂದರೆ, 40ನೇ ಪ್ರಕರಣದ ಅಡಿಯಲ್ಲಿ ರಚಿಸಿದ ವಿನಿಯಮಗಳು;

(ಎಮ್) "ವಾಹನ"ವು ಮಾನವರ, ಪ್ರಾಣಿಗಳ ಅಥವಾ ಸರಕುಗಳ ಸಾಗಣೆಗಾಗಿ ಅಥವಾ ಚಲನವಲನಕ್ಕಾಗಿ ಬಳಸಲಾಗುವ ಅಥವಾ ಬಳಸಲು ಸಾಧ್ಯವಿರುವ ಯಾವುದೇ ವಿಶೇಷ ವಾಹನ (contraption) ಅಥವಾ ಸಾಧನವನ್ನು (device) ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಮೋಟಾರು ವಾಹನಗಳ ಅಧಿನಿಯಮ, 1988ರಲ್ಲಿ (1988ರ ಕೇಂದ್ರ ಅಧಿನಿಯಮ 59), ಕರ್ನಾಟಕ ಹೆದ್ದಾರಿಗಳ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ, 44) ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅವುಗಳಿಗೆ ಕ್ರಮವಾಗಿ ನೀಡಿದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತಿನ ರಚನೆ.-** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ರಚಿಸಬಹುದು.

(2) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:-

| | | |
|---|---|---|
| (ಎ) | ಸಾರಿಗೆ ಇಲಾಖೆಯ ಪ್ರಭಾರ ಹೊಂದಿರುವ ಸಚಿವರು | ಅಧ್ಯಕ್ಷ |
| (ಬಿ) | ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ | ಉಪಾಧ್ಯಕ್ಷ |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ | ಪದನಿಮಿತ್ತ ಸದಸ್ಯ |

| | | |
|---|---|---|
| (ಡಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯ |
| (ಇ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಎಫ್) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯ |
| (ಜಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಪದನಿಮಿತ್ತ ಸದಸ್ಯ |
| (ಎಚ್) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಐ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪದನಿಮಿತ್ತ ಸದಸ್ಯ |
| (ಜೆ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ | ಪದನಿಮಿತ್ತ ಸದಸ್ಯ |
| (ಕೆ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯ |
| (ಎಲ್) | ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ | ಪದನಿಮಿತ್ತ ಸದಸ್ಯ |
| (ಎಂ) | ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಸ್ತೆ ಸುರಕ್ಷತಾ ಆಯುಕ್ತ | ಸದಸ್ಯ |
| (ಎನ್) | ಅಪರ ಆಯುಕ್ತ | ಸದಸ್ಯ ಕಾರ್ಯದರ್ಶಿ |
| (ಒ) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ರಸ್ತೆ ಸುರಕ್ಷತಾ ಕ್ಷೇತ್ರದಲ್ಲಿ ತಜ್ಞರಾಗಿರುವ ಇಬ್ಬರು ವ್ಯಕ್ತಿಗಳು | ಸದಸ್ಯರು |

(3) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು, ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಸಚಿವರು, ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಇತರ ತಜ್ಞರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಬಹುದು.

(4) ಯಾವೊಬ್ಬ ವ್ಯಕ್ತಿಯು, ಆತನು,-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಮತ್ತು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ನಿಲುವು ತಾಳಿ ಘೋಷಿಸಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಮಾಲಿಕತ್ವ ಹೊಂದಿದ ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲ್ಪಟ್ಟಿದ್ದರೆ ಅಥವಾ ವಜಾಗೊಂಡಿದ್ದರೆ;

(ಇ) ಸ್ವತಃ ಆಗಲಿ ಅಥವಾ ಪಾಲುದಾರನಾಗಿಯಾಗಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಪ್ರಾಧಿಕಾರದ ಆದೇಶದ ಮೂಲಕ ಮಾಡಿದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ಸಂದಾಯಿತ ಕಾನೂನು ವೃತ್ತಿದಾರನಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧ ಕಾನೂನು ವೃತ್ತಿದಾರನಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಲು ಅರ್ಹನಾಗತಕ್ಕದ್ದಲ್ಲ.

(5) ಪರಿಷತ್ತು, ಕನಿಷ್ಠಪಕ್ಷ ಆರು ತಿಂಗಳಿಗೆ ಒಂದು ಬಾರಿ ಸಭೆ ಸೇರತಕ್ಕದ್ದು. ಪದನಿಮಿತ್ತೇತರ ಸದಸ್ಯರು ಸಭೆಗಳಿಗೆ ಹಾಜರಾಗುವುದಕ್ಕೆ ನಿಯಮಿಸಲಾದ ಉಪವೇಶನ ಶುಲ್ಕ ಅಥವಾ ಪ್ರವಾಸ ಭತ್ಯೆ ಅಥವಾ ದಿನ ಭತ್ಯೆಯನ್ನು ಹೊಂದಲು ಅರ್ಹರಾಗಿರತಕ್ಕದ್ದು.

(6) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಸಲಹಾತ್ಮಕ ಸ್ವರೂಪದ್ದಾಗಿರತಕ್ಕದ್ದು ಮತ್ತು ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೆ ಸಲಹೆ ನೀಡತಕ್ಕದ್ದು.

**4. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಚನೆ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ" ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸಬಹುದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅಧಿಕಾರಗಳೊಂದಿಗೆ, ಚರ ಮತ್ತು ಸ್ಥಿರ ಎರಡು ಸ್ವತ್ತಿನ ಅರ್ಜನೆಗೆ, ಧಾರಣೆಕ್ಕೆ ಮತ್ತು ವಿಲೆಗೆ ಹಾಗೂ ಕರಾರು ಮಾಡಿಕೊಳ್ಳಲು ಮೇಲೆ ಹೇಳಿದ ಹೆಸರಿನ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಕಾಯವಾಗಿರತಕ್ಕದ್ದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) . ಪ್ರಾಧಿಕಾರದ ಕೇಂದ್ರ ಕಚೇರಿಯು ಬೆಂಗಳೂರು ನಗರದಲ್ಲಿರತಕ್ಕದ್ದು.

**5. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ.–** ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

| | | |
|---|---|---|
| (ಎ) | ಸರ್ಕಾರದ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷ |
| (ಬಿ) | ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ | ಉಪಾಧ್ಯಕ್ಷ |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ | ಪದನಿಮಿತ್ತ ಸದಸ್ಯ |
| (ಡಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯ |
| (ಇ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಎಫ್) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯ |
| (ಜಿ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪದನಿಮಿತ್ತ ಸದಸ್ಯ |
| (ಎಚ್) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯ |
| (ಐ) | ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ | ಪದನಿಮಿತ್ತ ಸದಸ್ಯ |
| (ಜೆ) | ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತ | ಸದಸ್ಯ |
| (ಕೆ) | ಅಪರ ಆಯುಕ್ತ | ಸದಸ್ಯ ಕಾರ್ಯದರ್ಶಿ |

**6. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಪ್ರಕಾರ್ಯಗಳು.–** ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಪರಿಣಾಮಕಾರಿ ರಸ್ತೆ ಸುರಕ್ಷತಾ ನೀತಿಗಳನ್ನು ರೂಪಿಸುವುದು ಹಾಗೂ ಕಾಲಕಾಲಕ್ಕೆ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಪರಿಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಸ್ಕೀಮುಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಜಾರಿಗೊಳಿಸುವುದು;

(ii) ರಸ್ತೆ ಸುರಕ್ಷತಾ ಕ್ರಮಗಳನ್ನು (standards) ಮತ್ತು ಕಾರ್ಯವಿಧಾನಗಳನ್ನು ನಿಯಮಿಸುವುದು ಮತ್ತು ಜಾರಿಗೊಳಿಸುವುದು ಹಾಗೂ ನಿಯಮಿಸಲಾದ ಕ್ರಮಗಳು ಮತ್ತು ಕಾರ್ಯವಿಧಾನಗಳಿಗನುಸಾರವಾಗಿ ನಡೆದುಕೊಳ್ಳುವುದು ಅಥವಾ ನಡೆದುಕೊಳ್ಳುವಂತೆ ಮಾಡುವುದು:

(iii) ಸಾಮಾನ್ಯವಾಗಿ ರಸ್ತೆಗಳ ಸೂಕ್ತ ಮತ್ತು ಸುರಕ್ಷಿತ ಬಳಕೆಗೆ ಸಂಬಂಧಿಸಿದಂತೆ ವಾಹನ ಚಾಲಕರು, ಮೋಟಾರು ಸವಾರರು ಮತ್ತು ಇತರ ಸಾರ್ವಜನಿಕರನ್ನು ಸುಶಿಕ್ಷಿತರನ್ನಾಗಿ ಮಾಡುವುದನ್ನು ಒಳಗೊಂಡಂತೆ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;

(iv) ರಸ್ತೆ ಸುರಕ್ಷತೆ ಕುರಿತು ಸಂಶೋಧನೆ ನಡೆಸುವುದು ಹಾಗೂ ಯೋಜನೆ, ನೀತಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ರಸ್ತೆ ಅಪಘಾತಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಅಂಕಿ-ಅಂಶಗಳ ಮೌಲ್ಯಮಾಪನ ಮಾಡುವುದು;

(v) ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಕರ್ತವ್ಯಗಳನ್ನು ನಿಭಾಯಿಸುತ್ತಿರುವ ಎಲ್ಲಾ ಏಜೆನ್ಸಿಗಳ ಮತ್ತು ಸರ್ಕಾರಿ ಇಲಾಖೆಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(vi) ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣೆ ಕುರಿತಂತೆ ಹಿತಾಸಕ್ತಿಯುಳ್ಳ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಏಜೆನ್ಸಿಗಳೊಂದಿಗೆ ಸಂಪರ್ಕ ಸಾಧಿಸುವುದು:

(vii) ಅಪಘಾತ ನಡೆಯುವ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ (ಕೆಎಸ್‌ಆರ್‌ಎಸ್‌ಎ) ಮುಂದಾಳತ್ವದಲ್ಲಿ ಸ್ವ-ಸಹಾಯ ಗುಂಪುಗಳನ್ನು ರೂಪಿಸುವುದು:

(viii) ನಿಧಿ ನಿರ್ವಹಣೆ;

(ix) ರಸ್ತೆ ಸುರಕ್ಷತಾ ಸ್ಕೀಮುಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು;

(x) ರಸ್ತೆ ಸುರಕ್ಷತಾ ಪರಿಯೋಜನೆಗಳಿಗಾಗಿ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳು ಮತ್ತು ಸಾಧನಗಳ ಖರೀದಿಗಾಗಿ ಮತ್ತು ಅಳವಡಿಕೆಗಾಗಿ ವೆಚ್ಚವನ್ನು ಮಂಜೂರು ಮಾಡುವುದು:

(xi) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತ ಅಧ್ಯಯನಗಳು. ಪರಿಯೋಜನೆಗಳು ಮತ್ತು ಸಂಶೋಧನೆಯನ್ನು ನಡೆಸುವುದಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು:

(xii) ದೈಹಿಕ ಅಥವಾ ಮಾನಸಿಕ ಆಘಾತ-ಕಾಳಜಿ (trauma-care) ಕಾರ್ಯಕ್ರಮಗಳಿಗೆ ಅಥವಾ ಕಾರ್ಯಚಟುವಟಿಕೆಗಳಿಗೆ ವೆಚ್ಚವನ್ನು ಮಂಜೂರು ಮಾಡುವುದು:

(xiii) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚವನ್ನು ಮಂಜೂರು ಮಾಡುವುದು:

(xiv) ರಸ್ತೆ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದ ವೆಚ್ಚವನ್ನು ಮಂಜೂರು ಮಾಡುವುದು:

(xv) ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು:

(xvi) ಪೊಲೀಸ್ ಇಲಾಖೆಯ ಮುಖಾಂತರ ಸಮಗ್ರ ರಸ್ತೆ ಅಪಘಾತ ದತ್ತಾಂಶಾಧಾರಿತ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xvii) ಕ್ರಿಯಾ ಯೋಜನೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಇಡೀ ಹಿತಾಸಕ್ತ ಇಲಾಖೆಗಳ ಎಂದರೆ ಲೋಕೋಪಯೋಗಿ. ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪೊಲೀಸ್, ಸಾರಿಗೆ. ಶಿಕ್ಷಣ. ಆರೋಗ್ಯ. ನಗರಾಭಿವೃದ್ಧಿ, ಅಬಕಾರಿ ಮುಂತಾದಂಥ ಇಲಾಖೆಗಳ ಮೂಲಕ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯ ನಿರ್ದೇಶನಗಳಿಗನುಸಾರವಾಗಿ ಕಾಲಕಾಲಕ್ಕೆ ಅದನ್ನು ಪರಿಷ್ಕರಿಸುವುದು;

(xviii) ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕರೆಯುವ ಎಲ್ಲಾ ಸಭೆಗಳಿಗೆ ಅಥವಾ ಪರಿಶೀಲನಾ ಸಭೆಗಳಿಗೆ ಹಾಜರಾಗುವುದು ಹಾಗೂ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ

ನ್ಯಾಯಾಲಯ ಸಮಿತಿಯು ನೀಡಿದ ಎಲ್ಲ ಅಂಥ ನಿರ್ದೇಶನಗಳ ಅನುಪಾಲನೆಗೆ ಕೇಳುವ ಎಲ್ಲಾ ಅಂಥ ಮಾಹಿತಿ ಅಥವಾ ವರದಿಗಳು ಅಥವಾ ಚರ್ಚೆ ಅಥವಾ ಅಂಕಿ-ಅಂಶಗಳು ಅಥವಾ ದಾಖಲೆಗಳು ಮುಂತಾದವನ್ನು ಒದಗಿಸುವುದು. ಎಲ್ಲ ಹಿತಾಸಕ್ತ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯ ಎಲ್ಲ ನಿರ್ದೇಶನಗಳನ್ನು ಕಡ್ಡಾಯವಾಗಿ (invariably) ಅನುಷ್ಠಾನಗೊಳಿಸತಕ್ಕದ್ದು ಹಾಗೂ ನಿಯಮಿಸಲಾದ ಅವಧಿಯೊಳಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕೇಳುವ ಎಲ್ಲಾ ದತ್ತಾಂಶ ಅಥವಾ ಮಾಹಿತಿ ದಾಖಲೆಗಳನ್ನು ಸಹ ಒದಗಿಸುವುದು; ಮತ್ತು

(xix) ರಸ್ತೆ ಸುರಕ್ಷತಾ ಕ್ರಮಗಳ ಅನುಷ್ಠಾನದ ಉದ್ದೇಶಕ್ಕಾಗಿ ವಿಶೇಷ ಜಾರಿ ಕ್ರಮಗಳನ್ನು (drives) ನಿರ್ವಹಿಸುವ ಅಧಿಕಾರವನ್ನು ಹಿತಾಸಕ್ತ ಇಲಾಖೆಗಳ ಮುಖ್ಯಸ್ಥರು ಹೊಂದಿರುವುದು.

**7. ಸಭೆಗಳು.**– (1) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು. ಪ್ರಾಧಿಕಾರದ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಅಧ್ಯಕ್ಷರು, ನಿರ್ಧರಿಸಬಹುದಾದ ಅಂಥ ಸಮಯಕ್ಕೆ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳಲ್ಲಿ ವ್ಯವಹರಿಸಬೇಕಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ರಚಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಪ್ರಾಧಿಕಾರದ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ಅಥವಾ ಆತನ ಗೈರುಹಾಜರಿಯಲ್ಲಿ, ಉಪಾಧ್ಯಕ್ಷ ಅಥವಾ ಸಂದರ್ಭಾನುಸಾರವಾಗಿ ಉಪಸ್ಥಿತರಿರುವ ಸದಸ್ಯರು ಆಯ್ಕೆ ಮಾಡಿದ ಒಬ್ಬ ಸದಸ್ಯನು ವಹಿಸತಕ್ಕದ್ದು.

(3) ಪ್ರಾಧಿಕಾರವು ಕನಿಷ್ಠಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(4) ಪ್ರಾಧಿಕಾರದ ಸಭೆಯ ಗಣಪೂರ್ತಿ (ಕೋರಂ) ಐದು ಆಗಿರತಕ್ಕದ್ದು.

**8. ವ್ಯವಹಾರ ನಿರ್ವಹಣೆ.**–ಪ್ರಾಧಿಕಾರವು ನಿರ್ಧರಿಸಬೇಕಾದ ಪ್ರತಿಯೊಂದು ವಿಷಯವನ್ನು, ಉಪಸ್ಥಿತರಿರುವ ಸದಸ್ಯರ ಬಹುಮತದ ನಿರ್ಣಯಕ್ಕನುಸಾರವಾಗಿ, ಪ್ರಾಧಿಕಾರದ ಸಭೆಗಳಲ್ಲಿ ಪರಿಗಣಿಸತಕ್ಕದ್ದು ಮತ್ತು ಸಂದರ್ಭಾನುಸಾರವಾಗಿ ನಿರ್ವಹಿಸತಕ್ಕದ್ದು.

**9. ಖಾಲಿ ಸ್ಥಾನಗಳು, ಇತ್ಯಾದಿ ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸುವಂತಿಲ್ಲ.**– ಪ್ರಾಧಿಕಾರದ ಯಾವುದೇ ಕ್ರಮವನ್ನು ಅಥವಾ ವ್ಯವಹರಣೆಗಳನ್ನು, ಯಾವುದೇ ಖಾಲಿಸ್ಥಾನವಿರುವ ಅಥವಾ ಪ್ರಾಧಿಕಾರದ ರಚನೆಯಲ್ಲಿನ ದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.

**10. ರಸ್ತೆ ಸುರಕ್ಷತಾ ಆಯುಕ್ತ.**– ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು ಸಹ ಆಗಿರತಕ್ಕದ್ದು. ಅಪರ ಆಯುಕ್ತನು ಪ್ರಾಧಿಕಾರದ ಅಪರ ಆಯುಕ್ತನಾಗಿರತಕ್ಕದ್ದು.

**11. ಪ್ರಾಧಿಕಾರದ ಆಡಳಿತಾತ್ಮಕ ಮುಖ್ಯಸ್ಥ.**– ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಪ್ರಾಧಿಕಾರದ ಪ್ರಕಾರ್ಯ ನಿರ್ವಹಣೆಗಾಗಿ ಆಡಳಿತಾತ್ಮಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅಪರ ಆಯುಕ್ತನು ಆತನಿಗೆ ನೆರವಾಗತಕ್ಕದ್ದು.

**12. ನಿಧಿಯ ಸ್ಥಾಪನೆ.**– (1) ಪ್ರಾಧಿಕಾರದ ರಚನೆಯ ತರುವಾಯ, ಒಂದು ವರ್ಷದ ಒಳಗಾಗಿ, 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ಮುಂದಿನವುಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು:–

(ಎ) ರಾಜ್ಯ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಬಿ) ಕೇಂದ್ರ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಸಿ) ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಅಥವಾ ಸಂಘಟನೆಗಳು ನೀಡಿದ ಕೊಡುಗೆಗಳು;

(ಡಿ) 30ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ರಾಜಿ ಶುಲ್ಕ; ಮತ್ತು

(ಇ) ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ಮೂಲಕ ಸಂಗ್ರಹಿಸಿದ ಶುಲ್ಕದ ಮೊತ್ತ;

– ಇವುಗಳನ್ನು ರಸ್ತೆ ಸುರಕ್ಷತಾ ನಿಧಿಗೆ ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 200ನೇ ಪ್ರಕರಣದ ಅಡಿಯಲ್ಲಿ ಹಿಂದಿನ ವರ್ಷದಲ್ಲಿ ಸಂಗ್ರಹಿಸಿದ ರಾಜಿ ಶುಲ್ಕದ ಶೇಕಡಾ ಐವತ್ತಕ್ಕೆ ಸಮನಾದ ಮೊತ್ತವನ್ನು ಪ್ರತಿವರ್ಷ ನಿಧಿಗೆ ನೀಡತಕ್ಕದ್ದು.

(4) ನಿಯಮಿಸಬಹುದಾದ ಅಂಥ ಇತರ ನಿಧಿಯ ಮೂಲಗಳು.

13. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.- (1) ವಾಹನ ನೋಂದಣಿ ಸಮಯದಲ್ಲಿ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ದರದಲ್ಲಿ, ಒಂದು ಸಾವಿರ ರೂಪಾಯಿಗಳಿಗೆ ಮೀರದಂಥ ಏಕಕಾಲಿಕ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು. ಬೇರೆ ಬೇರೆ ವರ್ಗದ ಮೋಟಾರು ವಾಹನಗಳಿಗಾಗಿ ಬೇರೆ ಬೇರೆ ದರಗಳನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(3) ನೋಂದಣಿ ಪ್ರಾಧಿಕಾರವು, ನೋಂದಣಿ ಸಮಯದಲ್ಲಿ ಹಾಗೆ ವಿಧಿಸಿದ ಉಪಕರವನ್ನು ಸಂಗ್ರಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಗೆ ಇರಸಾಲು (remit) ಮಾಡತಕ್ಕದ್ದು.

14. ನಿಧಿಯನ್ನು ನಿಹಿತಗೊಳಿಸುವುದು ಮತ್ತು ನಿರ್ವಹಿಸುವುದು.- (1) ನಿಧಿಯನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದರಲ್ಲಿ ನಿಹಿತಗೊಳಿಸಿದ ನಿಧಿಯನ್ನು ನಿರ್ವಹಿಸತಕ್ಕದ್ದು.

(3) ನಿಧಿಯ ಭಾಗವಾಗಿರುವ ಎಲ್ಲಾ ಮೊತ್ತವನ್ನು, ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಖಾತೆಯನ್ನು ಪ್ರಾಧಿಕಾರವು ನಿರ್ಧರಿಸಬಹುದಾದಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತರು ಮತ್ತು ಅಪರ ಆಯುಕ್ತರು ಜಂಟಿಯಾಗಿ ನಿರ್ವಹಿಸತಕ್ಕದ್ದು.

15. ನಿಧಿಯ ಬಳಕೆ.- ನಿಧಿಯನ್ನು ಈ ಮುಂದಿನ ಎಲ್ಲ ಅಥವಾ ಯಾವುದಾದರೂ ಒಂದು ಉದ್ದೇಶಗಳಿಗೆ ಉಪಯೋಗಿಸತಕ್ಕದ್ದು, ಎಂದರೆ:-

(ಎ) ರಸ್ತೆ ಸುರಕ್ಷತಾ ಕಾರ್ಯಕ್ರಮಗಳು;

(ಬಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳು;

(ಸಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳ ಖರೀದಿ;

(ಡಿ) ಪರಿಯೋಜನೆಗಳು, ತರಬೇತಿಗಳನ್ನು ಕುರಿತ ಅನುಮೋದಿತ ಅಧ್ಯಯನಗಳಿಗೆ ನಿಧಿ ಒದಗಿಸಲು;

(ಇ) ದೈಹಿಕ ಅಥವಾ ಮಾನಸಿಕ ಆಘಾತ-ಕಾಳಜಿ (trauma-care) ಕಾರ್ಯಕ್ರಮಗಳು ಮತ್ತು ತತ್ಸಂಬಂಧಿ ಕಾರ್ಯಚಟುವಟಿಕೆಗಳು;

(ಎಫ್) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳು;

(ಜಿ) ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳ ಮೇಲಿನ ವೆಚ್ಚ; ಮತ್ತು

(ಹೆಚ್) ನಿಯಮಿಸಬಹುದಾದ ಯಾವುದೇ ಇತರ ಉದ್ದೇಶ.

16. ಅಪಘಾತಗಳ ಕಾರಣಗಳನ್ನು ನಿವಾರಿಸಲು ಆದೇಶಿಸುವ ಅಧಿಕಾರ.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೊಬ್ಬ ವ್ಯಕ್ತಿಯ ಮೂಲಕ ಅಥವಾ ಅನ್ಯಥಾ ರೀತಿಯಲ್ಲಿ ಸಲ್ಲಿಸಿದ ದೂರು ಅಥವಾ ವರದಿಯ ಆಧಾರದ ಮೇಲೆ ಪ್ರಾಧಿಕಾರಕ್ಕೆ,-

(ಎ) ಸಾರ್ವಜನಿಕ ರಸ್ತೆಯಲ್ಲಿ ಯಾವುದೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಕೃತ್ಯವು; ಅಥವಾ

(ಬಿ) ಯಾವುದೇ ಮನ್ನಣೆ ಪಡೆದ ಆಡಳಿತಾತ್ಮಕ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಾರ್ವಜನಿಕ ರಸ್ತೆಯಲ್ಲಿ ಕಮಾನುಗಳು, ಬ್ಯಾನರ್‌ಗಳು, ಬಟ್ಟೆ ಮೇಲ್ಚಾವಣಿಗಳು, ಟೆಂಟುಗಳು, ಪೆಂಡಾಲುಗಳು, ಕಂಬಗಳು, ವೇದಿಕೆಗಳು, ಭಾಷಣ ವೇದಿಕೆಗಳು, ಪ್ರತಿಮೆಗಳು, ಸ್ಮಾರಕಗಳು ಮತ್ತು ಅಂತಹುವೇ ಇತರ ನಿರ್ಮಿತಿಗಳನ್ನು ಒಳಗೊಂಡಂತೆ ಯಾವುದೇ ವಾಹನ, ಪ್ರಾಣಿ, ನಿರ್ಮಿತಿಯನ್ನು ಇರಿಸಿರುವುದು ಅಥವಾ ನಿಲ್ಲಿಸಿರುವುದು; ಅಥವಾ

(ಸಿ) ಸಾರ್ವಜನಿಕ ರಸ್ತೆಯಲ್ಲಿ ಪ್ರಾಣಿಗಳ ಅಥವಾ ವಾಹನಗಳ ಚಲನವಲನವು; ಅಥವಾ

(ಡ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಮರ, ನಿರ್ಮಿತಿ ಅಥವಾ ನಿರ್ಮಿಸಿದ ಕಟ್ಟಡವು ಅಥವಾ

(ಢ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಕಟ್ಟಡದ ಅಥವಾ ಆವರಣದ ಪ್ರವೇಶ ಮತ್ತು ನಿರ್ಗಮನವು.

- ಅಪಘಾತಗಳನ್ನುಂಟು ಮಾಡುವ ಅಥವಾ ಸಂಚಾರದ ಮುಕ್ತ ಹರಿವಿಗೆ ಅಡಚಣೆಯನ್ನುಂಟು ಮಾಡುವ ಅಥವಾ ಯಾವುದೇ ವಾಹನ ಚಾಲಕನ ಗಮನವನ್ನು ಭಂಗಗೊಳಿಸುವ ಅಥವಾ ದೃಷ್ಟಿಗೆ ಅಡಚಣೆಯುಂಟು ಮಾಡುವ ರೀತಿಯಲ್ಲಿದೆ ಎಂದು ಮನವರಿಕೆಯಾದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು, ಅದರ ಕಾರಣಗಳನ್ನು ದಾಖಲಿಸಿದ ನಂತರ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಂಬಂಧಪಟ್ಟ ವ್ಯಕ್ತಿಗೆ ತಾನು ಅವಶ್ಯವೆಂದು ಪರಿಗಣಿಸಬಹುದಾದಂತೆ ಎರಡು ತಿಂಗಳ ಒಳಗಾಗಿ ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದೊಳಗೆ ನಿರ್ದೇಶನವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ತುರ್ತು ಸಂದರ್ಭದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಅಪಘಾತವನ್ನು ಅಥವಾ ಸಂದರ್ಭಾನುಸಾರ ಅಡಚಣೆಯನ್ನು ತಡೆಯಲು ಅವಶ್ಯವಿರಬಹುದಾದ ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದಕ್ಕೆ ಜವಾಬ್ದಾರನಾದ ವ್ಯಕ್ತಿಯಿಂದ ಅದರ ವೆಚ್ಚವನ್ನು ವಸೂಲು ಮಾಡಬಹುದು.

**17. ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸುವ ಅಧಿಕಾರ.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸಾರ್ವಜನಿಕ ರಸ್ತೆಯಲ್ಲಿ ಸುರಕ್ಷತೆಯನ್ನು ಕಾಪಾಡಲು ಅಂಥ ರಸ್ತೆಯಲ್ಲಿ ಯಾವುದೇ ಕಾಮಗಾರಿ ಅಥವಾ ಸುಧಾರಣೆಯನ್ನು ಕೈಗೊಳ್ಳುವುದು ಅವಶ್ಯವೆಂದು ಪ್ರಾಧಿಕಾರವು ಪರಿಗಣಿಸಿದರೆ, ಹಾಗೆ ಆದೇಶಿಸುವುದು ಪ್ರಾಧಿಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಕಾಮಗಾರಿಗಳನ್ನು ಅಥವಾ ಸುಧಾರಣೆಗಳನ್ನು ಅಂಥ ಸಮಯದೊಳಗೆ ಕೈಗೊಳ್ಳಲು ಪ್ರತಿಯೊಂದು ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು, ಬದ್ಧವಾಗಿರತಕ್ಕದ್ದು:

ಪರಂತು, ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 44) ಅಡಿಯಲ್ಲಿ ಗೊತ್ತುಪಡಿಸಿದ ಸಂಬಂಧಪಟ್ಟ ಕ್ಷೇತ್ರದ ಹೆದ್ದಾರಿ ಪ್ರಾಧಿಕಾರದೊಂದಿಗೆ ಪೂರ್ವ ಸಮಾಲೋಚನೆ ನಡೆಸಿದ ಹೊರತು, ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ಸದರಿ ಅಧಿನಿಯಮದ ಅಡಿಯಲ್ಲಿ ಹಾಗೆಂದು ಘೋಷಿತವಾದ ಯಾವುದೇ ಹೆದ್ದಾರಿಯ ಸಂಬಂಧದಲ್ಲಿ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶಗಳನ್ನು ಜಾರಿಗೆ ತರುವಲ್ಲಿ ಪ್ರಾಧಿಕಾರಕ್ಕೆ ನೆರವು ನೀಡುವುದು ರಾಜ್ಯ ಸರ್ಕಾರದ, ಸ್ಥಳೀಯ ಪ್ರಾಧಿಕಾರದ ಅಥವಾ ಯಾವುದೇ ಇತರ ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**18. ವೆಚ್ಚವನ್ನು ವಸೂಲಿ ಮಾಡುವ ಅಧಿಕಾರ.-** ಯಾವೊಬ್ಬ ವ್ಯಕ್ತಿಯು, 13ನೇ ಪ್ರಕರಣದ ಅಡಿಯಲ್ಲಿ ಜಾರಿ ಮಾಡಲಾದ ಲಿಖಿತ ಆದೇಶವನ್ನು ತಿರಸ್ಕರಿಸಿದರೆ ಅಥವಾ ಆದೇಶವನ್ನು ಪಾಲಿಸಲು ವಿಫಲನಾದರೆ, ಪ್ರಾಧಿಕಾರವು ಅಪಾಯವನ್ನು ತಡೆಯಲು ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸಲು ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಹಾಗೂ ಅಂಥ ವ್ಯಕ್ತಿಯಿಂದ ಅದರ ನ್ಯಾಯಯುತ ಬಡ್ಡಿ ಸಹಿತ ವೆಚ್ಚವನ್ನು ವಸೂಲು ಮಾಡಿಕೊಳ್ಳಬಹುದು.

**19. ಭೂ ಕಂದಾಯ ಬಾಕಿ ಎಂಬಂತೆ ವಸೂಲು ಮಾಡಬಹುದಾದ ಮೊತ್ತಗಳು.-** ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರಕ್ಕೆ ಬರಬೇಕಾದ ಯಾವುದೇ ಮೊತ್ತವನ್ನು, ವಸೂಲಿಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ, ಬಾಕಿ ಇರುವ ಭೂ ಕಂದಾಯದ ಬಾಕಿ ಎಂಬಂತೆಯೇ ರೀತಿಯಲ್ಲಿ ವಸೂಲು ಮಾಡಬಹುದು.

**20. ಪ್ರತ್ಯಾಯೋಜನೆ.-** ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳಿಗೆ ಒಳಪಟ್ಟು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ರಸ್ತೆ ಸುರಕ್ಷತಾ ಆಯುಕ್ತನಿಗೆ, ರಸ್ತೆ ಸುರಕ್ಷತಾ ಅಪರ ಆಯುಕ್ತನಿಗೆ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗೆ ಪ್ರತ್ಯಾಯೋಜಿಸಬಹುದು.

21. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ.- ರಾಜ್ಯದಲ್ಲಿ ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 215ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಈಗಾಗಲೇ ರಚನೆಗೊಂಡಿರುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು, ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

22. ಸಿಬ್ಬಂದಿ.- (1) ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಈ ಅಧಿನಿಯಮದ ಅಡಿಯಲ್ಲಿನ ಅದರ ಪ್ರಕಾರ್ಯಗಳ ನಿರ್ವಹಣೆಗೆ ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು.

(2) ಸಿಬ್ಬಂದಿಯ ಪದನಾಮ, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

23. ವೆಚ್ಚಗಳು.- ಸಿಬ್ಬಂದಿ ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳನ್ನು ಒಳಗೊಂಡು ನಿಧಿಯ ನಿರ್ವಹಣೆಯ ಎಲ್ಲಾ ವೆಚ್ಚಗಳನ್ನು ನಿಧಿಯಿಂದ ಭರಿಸತಕ್ಕದ್ದು.

**24. ಲೆಕ್ಕಪತ್ರಗಳು.-** ನಿಧಿಯ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತರು ನಿರ್ವಹಿಸತಕ್ಕದ್ದು.

**25. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ವರದಿಗಳು, ಇತ್ಯಾದಿಯನ್ನು ಸಲ್ಲಿಸುವುದು.-** ಪ್ರತಿಯೊಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು, ಅಂಥ ವರದಿಗಳನ್ನು ಮತ್ತು ವಿವರಗಳನ್ನು ಹಾಗೂ ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ರಸ್ತೆ ಸುರಕ್ಷತಾ ಆಯುಕ್ತರಿಗೆ ಒದಗಿಸತಕ್ಕದ್ದು ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ವಾರ್ಷಿಕವಾಗಿ, ಪ್ರಾಧಿಕಾರಕ್ಕೆ ಕ್ರೋಢೀಕೃತ ವರದಿಯನ್ನು ಸಲ್ಲಿಸತಕ್ಕದ್ದು.

